Office of the Joint Director Town Planning

# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

**ಹೆಚ್ಚುವರಿ ನಿರ್ದೇಶಕರು(ನಗರ ಯೋಜನೆ) ರವರ ಕಛೇರಿ,ಮಹಾನಗರ ಪಾಲಿಕೆ,ಎನ್.ಆರ್. ವೃತ್ತ,ಬೆಂಗಳೂರು–02.**

ಸಂಖ್ಯೆ: ಜೆಡಿಟಿಪಿ (ದ)/ಪ್ರಾ.ಪ/ಸನಿ/42/2014-15 ದಿನಾಂಕ: 22-01-2015.

## ಪ್ರಾರಂಭಿಕ ಪ್ರಮಾಣ ಪತ್ರ

**ವಿಷಯ:** ಆಸ್ತಿ ಸಂಖ್ಯೆ 12/28/2, ಕೊತ್ತನೂರು ಗ್ರಾಮ, ಉತ್ತರಹಳ್ಳಿ ಹೋಬಳಿ, ವಾರ್ಡ್ ಸಂಖ್ಯೆ 195, ಬೆಂಗಳೂರು ಇಲ್ಲಿ ನಿರ್ಮಿಸಲಾಗುತ್ತಿರುವ ವಸತಿ ಸಮುಚ್ಚಯ ಕಟ್ಟಡಕ್ಕೆ ಪ್ರಾರಂಭಿಕ ಪ್ರಮಾಣ ಪತ್ರ ನೀಡುವ ಬಗ್ಗೆ.

**ಉಲ್ಲೇಖ:** 1) ನಕ್ಷೆ ಮಂಜೂರಾತಿ ಸಂಖ್ಯೆ: BBMP/Addl.Dir/ JD South/ LP 0540/12-13 ದಿ: 24-10-2013.
2) ಅರ್ಜಿದಾರರ ಮನವಿ ದಿನಾಂಕ: 14-11-2014.
3) ಪ್ರಧಾನ ಅಭಿಯಂತರವರ ಆದೇಶ ದಿನಾಂಕ: 21-11-2014.

*****

ಕೊತ್ತನೂರು ಗ್ರಾಮ, ಉತ್ತರಹಳ್ಳಿ ಹೋಬಳಿ, ವಾರ್ಡ್ ಸಂಖ್ಯೆ 195 ರಲ್ಲಿರುವ ಆಸ್ತಿ ಸಂಖ್ಯೆ 12/28/2 ಇಲ್ಲಿ ನಿರ್ಮಿಸುತ್ತಿರುವ 2ತಳ+ನೆಲ+ಮೇಲಿನ 9 ಅಂತಸ್ತುಗಳ 162 ಘಟಕಗಳ್ಳುಳ ವಸತಿ ಸಮುಚ್ಚಯ ಕಟ್ಟಡಕ್ಕಾಗಿ ನಕ್ಷೆ ಸಂಖ್ಯೆ: BBMP/Addl.Dir/ JD South/ LP 0540/12-13 ದಿ: 24-10-2013 ರಂದು ಮಂಜೂರಾತಿ ನೀಡಲಾಗಿದೆ. ವಸತಿ ಸಮುಚ್ಚಯ ಕಟ್ಟಡದ ಪ್ರಾರಂಭಿಕ ಪ್ರಮಾಣ ಪತ್ರ ನೀಡುವ ಸಲುವಾಗಿ ಕಟ್ಟಡದ ಸ್ಥಳವನ್ನು ದಿನಾಂಕ: 17-11-2014 ರಂದು ಉಪ ನಿರ್ದೇಶಕರು, ಸಹಾಯಕ ನಿರ್ದೇಶಕರು ಮತ್ತು ಸಹಾಯಕ ಅಭಿಯಂತರರವರೊಂದಿಗೆ ಸ್ಥಳ ಪರಿಶೀಲಿಸಿದ್ದು, ವಲಯ ನಿಯಮಾವಳಿಯಂತೆ ಅಗತ್ಯ ನಡುಜಾಗಗಳನ್ನು ಬಿಟ್ಟು ಆರ್.ಸಿ.ಸಿ ಕಂಬಗಳನ್ನು ಅಳವಡಿಸಿರುತ್ತಾರೆ. ಪ್ರಾರಂಭಿಕ ಪ್ರಮಾಣ ಪತ್ರಕ್ಕೆ ಅಗತ್ಯ ಶುಲ್ಕವಾದ ರೂ. 1,31,000/– ಗಳನ್ನು ಅರ್ಜಿದಾರರು ರಸೀದಿ ಸಂಖ್ಯೆ: TP/JDTPSUT/01/2014-15/Dec/0001 ದಿನಾಂಕ: 01-12-2014 ರಂದು ಭರಿಸಿದ್ದು, ಸಂದಾಯಿಸಿ ಕೊಳ್ಳಲಾಗಿದೆ. ವಸತಿ ಸಮುಚ್ಚಯ ಕಟ್ಟಡಕ್ಕೆ ಪ್ರಾರಂಭಿಕ ಪ್ರಮಾಣ ಪತ್ರವನ್ನು ಈ ಕೆಳಕಂಡ ಷರತ್ತಿಗೊಳಪಡಿಸಿ ನೀಡಲಾಗಿದೆ.

1) ಕಟ್ಟಡ ಕಾಮಗಾರಿಯನ್ನು ಮಂಜೂರಾತಿ ನಕ್ಷೆಯಂತೆ ನಿಯಮಾನುಸಾರ ನಿರ್ಮಿಸತಕ್ಕದ್ದು.
2) ಕಟ್ಟಡ ನಿರ್ಮಾಣದ ಪ್ರಗತಿಯನ್ನು ಕಾಲಾನುಸಾರ ಸಂಬಂಧಪಟ್ಟ ಕಛೇರಿಗೆ ಮಾಹಿತಿಯನ್ನು ನೀಡಿ ಮಂಜೂರಾತಿ ನಕ್ಷೆಯಂತೆ ನಿರ್ಮಿಸುತ್ತಿರುವ ಬಗ್ಗೆ ಪರಿವೀಕ್ಷಣೆಗೆ ಒಳಪಡಿಸತಕ್ಕದ್ದು.
3) ಕಟ್ಟಡ ನಿರ್ಮಾಣದ ಸ್ಥಳದಲ್ಲಿ ಅಕ್ಕ–ಪಕ್ಕದವರಿಗೆ ತೊಂದರೆಯಾಗದಂತೆ ಹಾಗೂ ಕೆಲಸಗಾರರಿಗಾಗಿ ಶೆಡ್ ಮತ್ತು ತಾತ್ಕಾಲಿಕ ಶೌಚಾಲಯಗಳನ್ನು ನಿರ್ಮಿಸತಕ್ಕದ್ದು.
4) ಮಾನ್ಯ ಸರ್ವೋಚ್ಚ ನ್ಯಾಯಾಲಯದ ಅಂತಿಮ ತೀರ್ಪಿಗೊಳಪಟ್ಟು ಉದ್ಯಾನವನ ಮತ್ತು ಬಯಲು ಜಾಗದ ಶುಲ್ಕವನ್ನು ಪಾವತಿಸುವ ಷರತ್ತಿಗೊಳಪಡಿಸಿ, ಮಾನ್ಯ ಉಚ್ಚ ನ್ಯಾಯಾಲಯವು W.P. No. 59791/2014 (LB-BMP) ರಲ್ಲಿ ನೀಡಿರುವ ಮಧ್ಯಂತರ ತಡೆಯಾಜ್ಞೆಯನ್ವಯ ಪ್ರಾರಂಭಿಕ ಪ್ರಮಾಣ ಪತ್ರ ಬಿಡುಗಡೆಗೊಳಿಸಲಾಗಿದೆ.

ಸಹಿ/–
ಜಂಟಿ ನಿರ್ದೇಶಕರು, ನಗರ ಯೋಜನೆ (ದಕ್ಷಿಣ)
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

Sri. Ramnarain C.K.,
Rep. by its Director, Arya Gruha Pvt. Ltd.,
GPA Holder for Sri. M. Manjunath
# 12/28/2, ಕೊತ್ತನೂರು ಗ್ರಾಮ,
ಉತ್ತರಹಳ್ಳಿ ಹೋಬಳಿ, ವಾರ್ಡ್ ಸಂಖ್ಯೆ 195,
ಬೆಂಗಳೂರು.

**ಪ್ರತಿಯನ್ನು:** ಕಾರ್ಯಪಾಲಕ ಅಭಿಯಂತರರು / ಸಹಾಯಕ ಕಾರ್ಯಪಾಲಕ ಅಭಿಯಂತರರು (ಬೊಮ್ಮನಹಳ್ಳಿ) ರವರಿಗೆ ಮಾಹಿತಿಗಾಗಿ ಮತ್ತು ಕ್ರಮಕ್ಕಾಗಿ.

ಜಂಟಿ ನಿರ್ದೇಶಕರು, ನಗರ ಯೋಜನೆ (ದಕ್ಷಿಣ)
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

22/01 22/1 22/1 22/1